ತೋಟದ ಮರಗಿಡಗಳ ಎಲೆಗಳ ಸಂದುಗೊಂದುಗಳಲ್ಲೂ ಸೂರ್ಯ ಕಿರಣ ಹೋಗಿ ಬಣ್ಣ ಬಣ್ಣಗಳು ಕಾಣುವಂತೆ ಮಾಡಿತು.

ಗಂಗ, ಪ್ರಸಾದನನ್ನು ತೃಪ್ತಿಯಿಂದ ನೋಡಿದಾಗ ಕಣ್ಣುಗಳು ನೆಮ್ಮದಿಯಿಂದ ಮಿಂಚಿದಂತೆ ಅನ್ನಿಸಿತು. ಅವಳಿಗೆ ತನ್ನ ಮಗುವಿನ ನೆನಪಾಯಿತು. 'ನೀವು ಇಂದ್ರಾಗಾಂಧೀನ ನೋಡ್ಲಿಕ್ಕೇ ಬ್ಯಾಕು ಈಗ! ಹೊಸ ಪೋರಿನ ನೋಡ್ದ ಹಾಂಗೆ ಅನಿಸ್ತದೆ!....'

'ಪಾಪು ನನ್ನನ್ನು ಇಷ್ಟಪಡುತ್ತಾಳಾ?'

'ಮಕ್ಕಳು ನನ್ನ ಜೊತೆ ಅಷ್ಟಾಗಿ ಸೇರುವುದಿಲ್ಲ. ಯಾಕೋ ಏನೊ ಮಕ್ಕಳು ನನ್ನ ಹತ್ತಿರಕ್ಕೆ ಬರಲು ಹಿಂಜರಿಯುತ್ತಾರೆ .... ಪಾಪ ಹೇಗೋ ಏನೋ?....'

'ಇಲ್ಲ ಆ ಪೋರಿಗೆ ನೀವಂದ್ರೆ ಬಾಳ ಸೇರಕ್ರೀ.... ಅವ್ವು ಇಲ್ಲೇ ಆಡ್ಕೋಳ್ತೀ ದಾಳ್ರಿ.... ಇರಿ. ಕರೀತೀನಿ....' ಎಂದವಳೇ ಜೋರಾಗಿ ಕೂಗಿಕೊಂಡಳು.

'ಏ... ಪೋರೀ... ಇಂದ್ರಾಗಾಂಧೀ... ಬಾರವ್ವಾ....'

ಪ್ರಸಾದನೆಂದ, 'ನಾನು ಅವ್ಳನ್ನ ದೂರದಿಂದ ನೋಡ್ದೆ. ಅವ್ಳು ನಿಜಕ್ಕೂ ನನ್ನನ್ನು ಇಷ್ಟಪಡ್ತಾಳೆ?....'

ಗಂಗೆ, ತನ್ನ ಬಿಳಿ ಬೆಣಚುಕಲ್ಲಿನಲ್ಲಿ ಮಾಡಿದಂತಿದ್ದ ಹಲ್ಲಿನ ಸಾಲು ಮಿಂಚಿಸಿ ನಗುತ್ತಾ, 'ನೋಡ್ತೀರ್ರೀ' ಎಂದು ಮತ್ತೆ ಮಗಳನ್ನು ಕರೆದಳು.

ಮಗು ಓಡೋಡಿ ಬಂದಿತು. ಅವಳು ಸೂರ್ಯ ಕಿರಣವೇ ಆಗಿದ್ದಳು! ಪ್ರಸಾದನನ್ನು ನೋಡಿ ತಟ್ಟನೆ ನಡಿಗೆ ನಿಧಾನ ಮಾಡಿದಳು. ಆಟದಲ್ಲಿ ಮಗ್ನಳಾಗಿದ್ದರಿಂದ ಪ್ರಸಾದನ ಜೊತೆ ತಾಯಿಯೂ ಇನ್ನೂ ಮಾತಾಡುತ್ತಿದ್ದು ದನ್ನು ಗಮನಿಸಲಿರಲಿಲ್ಲ. ಆ ತೋಟದ ಅರೆಗತ್ತಲಿನಲ್ಲಿ ಅಸ್ಪಷ್ಟವಾಗಿ ಕಂಡ ವಿವಿಧ ಹೂಗಳು ಅವಳ ಆಟದ ವಸ್ತುಗಳಾಗಿದ್ದವು. ಅವಳ ನೆಚ್ಚಿನ ಹೂವು ಎಂದರೆ ಪೀಪಿ ಹೂವು. ಶಾಲೆಯ ಹತ್ತಿರ ಪೀಪಿ ಹೂ ಬಿಡೋ ದೊಡ್ಡ ಮರ ಇತ್ತು. ಅದರ ಸುವಾಸನೆ ಅವಳನ್ನು ಬಹಳ ಆಕರ್ಷಿಸಿತ್ತು. ಜೊತೆ ಹುಡುಗಿಯರು ಹೂ ಪೋಣಿಸಲು ಸೂಜಿ ದಾರ ಬಳಸದೆಯೇ ಅತಿ ಸುಂದರವಾಗಿ, ಅಚ್ಚುಕಟ್ಟಾಗಿ ಪೀಪಿ ಹೂವಿನ ಹಾರವನ್ನು ಹೆಣಿಕೆಯಲ್ಲಿ ಜೋಡಿಸಿ ಹಾರ ಮಾಡುವ ಚಾಕಚಕ್ಯತೆ ತೋರಿಸಿ ಬಿಟ್ಟಿದ್ದರು. ಆ ಹೂವಿನ ನಿಜವಾದ ಹೆಸರು ಅವಳಿಗಿರಲಿ, ಗಂಗೆಗೇ ತಿಳಿದಿರಲಿಲ್ಲ. ಹೂವು ಶಹನಾಯ್ ಹಾಗಿತ್ತು. ಅದು ಗಂಗೆಗೆ ತನ್ನ ಊರಿನ ನೆನಪು ತರಿಸಿತ್ತು. ಇಂದ್ರಾಗಾಂಧೀ ಶಹನಾಯ್ ಕಂಡಿಲ್ಲ. ಅವಳು ಕಂಡಿರುವುದು ಬಲೂನು ಮಾರುವವನು ಮಾರುತ್ತಿದ್ದ 'ಪೀಪಿ' ಮಾತ್ರ. ಹೂವು ಅದನ್ನು ಹೋಲುತ್ತಿದ್ದರಿಂದ ಪೀಪಿ ಹೂವು ಎಂದು ಅದಕ್ಕೆ ನಾಮಕರಣ ಮಾಡಿದ್ದಳು. ಅದರ ಒಂದು ಹಾರ ಮಾಡಿಟ್ಟಿದ್ದಳು. ಆಮೇಲೆ ತಾಯಿ ಹೇಳಿ ಹೋದಂತೆ ಅವಳು ಕಾಕಡ, ಗೆಂಡೆಷಗಳು, ದಾಸವಾಳ, ಕಿತ್ತು ಒಂದು ಕಡೆ ಗುಡ್ಡೆಯನ್ನು ಮಾಡಿದಳು. ಅಷ್ಟರಲ್ಲಿ ಗಮನ ಕಾಡು ಪಾರಿವಾಳ ನೋಡಿ ಗಮನ ಅದರ ಮೇಲೆ ಹರಿಯಿತು. ಅದು ಹಾರಿಬಿಟ್ಟಿತು. ನಂತರ ಅಳಿಲೆಂದು ಪುಣಕ್ಕನೆ ಕಾಣಿಸಿಕೊಂಡು ಸರಸರ ಮರ ಏರಿ ಕಣ್‌ಬಿಟ್ಟು ಮುಚ್ಚುವುದರಲ್ಲಿ ಮರೆಯಾಗಿಬಿಟ್ಟಿತು. ತಲೆ ಮೇಲೆ ಅರ್ಧ ತಿಂದ ಹಣ್ಣು ಬಿದ್ದಾಗಲೇ ಅವಳಿಗೆ ಗೊತ್ತಾಗಿದ್ದು ಅಳಿಲು ಮರದ ಮೇಲೆ ಭೋಜನ ಮಾಡುತ್ತಿದ್ದಾಗ ಅದು ತಿಂದ ಸಪೋಟ ಜಾರಿ ಬಿದ್ದಿದೆ ಎಂದು ಹೋಗಿ ಅದನ್ನು ಗಬ ಬಗ ತಾನೂ ತಿಂದಳು. ಆ ಹಣ್ಣು ತೀರಾ ರುಚಿಯಾಗಿತ್ತು. ಸ್ವಲ್ಪ ಒಗರಾಗಿದ್ದರೂ ಅದೂ ಒಂದು ರುಚೀನೆ!

## ಶಕ್ತಿ

ಒಂದು
ಸಣ್ಣ ಧೂಳಿನ ಕಣವನ್ನೂ
ಮುಚ್ಚಿಡಲಾಗದ
ಕಣ್ಣಿನ ರೆಪ್ಪೆಗಳು,
ಬಚ್ಚಿಡುತ್ತವೆ
ನೂರಾರು
ಕನಸುಗಳನ್ನು...

★ ಶುಭದ




ಗಂಗೆ ಅವಳನ್ನು ಕೂಗಿ ಕರೆದಾಗ ಹೂವಿನ ಗುಡ್ಡೆ ನಿರ್ಲಕ್ಷಿಸಿ, ತಾನೇ ಹೆಣೆದ ಪೀಪಿ ಹೂ ಹಾರ ಧರಿಸಿ ಓಡಿ ಗಂಗೆ ಬಳಿಗೆ ಸೇರಿದಳು.

'ನೀವು ಆ ಪೋರೀನಾ ಹಚ್ಕೊಳ್ಳಿಕೆ ಹತ್ತರಾ!...' ಪಾಪು ತನ್ನ ಕರೆಗೆ ಓಗೊಟ್ಟು ಓಡಿ ಬರುವುದನ್ನು ನೋಡಿ ಮುಗುಳ್ನಗುತ್ತಾ ಗಂಗೆ ಹೇಳಿದಳು.'ನೋಡ್ರಿ, ಹ್ಯಾಂಗ ಹಾರ ಪೋಣಿಸಿ ಹಾಕ್ಕೊಂಡಾಳ' .... ಹುಚ್ಚು ಖೋಡಿ.... ಹೂವನ್ನೇ ಒಡವಿ ಅಂದ್ಕೊಂಡು ಖುಷಿಯಾಗ್ತಾಳ್ರಿ .... ಕಿವಿಯ ಬೆಂಡೋಲೆ, ಕೆಳವಂಕಿ, ಬಳಿ, ಚಾಳು ತುಂಬ, ನತ್ತು ಬುಗುಡಿ, ಒಡ್ಯಾಣ, ಸರ ಎಲ್ಲಾನೂ ನಮ್ಮ ಬಂಗ್ಲಿಯ ಬಣ್ಣ ಬಣ್ಣದ ಹೂಗಳಿಂದ ಮಾಡಿ ಹಾಕ್ಕೊಂಡು ಖುಷಿ ಪಡ್ತಾಳ್ರಿ.... ದೇವಸ್ಥಾನದ ಅಮ್ಮನವರಿಗೆ ಮಾಡೋ ಒಡವಿ ಅಲಂಕಾರ ಎಲ್ಲಾ ನೋಡ್ಕಂಡಾಳ್ರೀ ಅಂತವೇ ಒಡವಿಗಳ್ನ ಮಾಡಿ ಹಾಕ್ಕೊತಾಳ್ರೀ.... ಹೀಂಗ ಈ ರಾಜಕುಮಾರಿ ಆಡ್ತಿದ್ರ.... ನಾನು ಈಕಿ ಕಣ್ಣು, ಹುಬ್ಬು ನೋಡಿ ಖುಷಿ ಪಡ್ತೀನಿ ... ಅವ್ರು ಥೇಟ್ ನಿಮ್ಮದೇ!....' ಅವನನ್ನು ನೋಡಿ ನಾಚಿದಳು.

ಅವನು ಗಂಭೀರವಾಗಿ ಅಂದ 'ನನಗೇನು ಅಳುಕು ಎಂದ್ರೆ ಯಾರಾದ್ರೂ ನಿನ್ನ ಹಾಗೇ ಇವ್ಳಲ್ಲಿ ನನ್ನ ರೂಪ ನೋಡಿ, ಹಿಂದಿನಿಂದ ಏನಾದ್ರೂ ಮಾತಾಡ್ಕೊಂಡು ಅನುಮಾನ ಪಡ್ತಾರೇ ಏನೊ....'

'ಹೌಂದ್ರಿ .... ನಿಮ್ಮನ್ನೇ ಒಂದು ಪುಟ್ಟ ಪೋರಿ ಮಾಡಿಟ್ಟ ಹಾಗೆ ಈಕಿ ಕಾಣ್ತಾಳ್ರೀ.... ನಿಮ್ಮ ಹೋಲಿಕೆ ಬಹಳ ಐತೆ! ಆದ್ರೆ... ಅಂಜಿಕೆ ಬ್ಯಾಡ್ರೀ .... ಬ್ಯಾರೇ ಊರಿಗೆ ಹೋದ್ಮೆಲೆ ಯಾವ ಚಿಂತೆನೂ ಇಲ್ರೀ ಇವ್ಳು ಯಾರ ಮಗಳು ಎಂಬ ಚಿಂತೀನೇ ಬ್ಯಾಡ.... ಅಪ್ಪ, ಅಮ್ಮ ಅಂತ ನಾವಿಬ್ರೂ ಇರ್ತೀವಲ್ರೀ... ಅವಳ್ನ ನೋಡ್ರೀ ಹ್ಯಾಗೆ ಕಿನ್ನರಿ ಹಾಂಗ ಕಾಣ್ತಾಳಲ್ರೀ....'

ಇಬ್ಬರೂ ಕೂಡಿಕೊಂಡು ಆ ಹುಡುಗಿಯ ಬಗ್ಗೆ ಸಂತೋಷವಾಗಿ ಮಾತಾಡಿ ಕೊಂಡದ್ದು ಇದೇ ಮೊದಲ ಸಲವಾಗಿತ್ತು. ಇಂದು ಇಬ್ಬರನ್ನು ಪಾಪು ಒಂದು ಗೂಡಿಸಿದ್ದಳು. ಅವಳಿಂದಾಗಿ ಹೊಸ ಜೀವನ ಪ್ರಾರಂಭಿಸಲು ಇವರಿಬ್ಬರೂ ಸಿದ್ಧರಾಗಿ ನಿರ್ಧರಿಸಿದ ಮೇಲೆ ಹಿಂದಿನ ಅಳುಕು, ಚಿಂತೆಗಳು ಮಂಕಾಗಿ ಬಿಟ್ಟಳು.

ಪಾಪುಗೆ ಇವರಿಬ್ಬರೂ ಅನ್ಯೋನ್ಯತೆಯಲ್ಲಿ ಕುಳಿತಿದ್ದನ್ನು ಕಂಡು ಅದೇನೋ ಸಂಕೋಚದ ಅನುಭವವಾಯಿತು. ತಾಯಿ ಬಳಿಯ ಸಾಮಿಪ್ಯ ಇಷ್ಟು ಕಾಲ ಅವಳೊಬ್ಬಳಿಗೇ ಇತ್ತು. ಅವಳ ಸ್ಥಾನದಲ್ಲಿ ಹೀಗೆ ಪ್ರಸಾದನನ್ನು ಕಂಡಾಗಲೆಲ್ಲಾ ಕಸಿವಿಸಿಯಾಗುತ್ತಿತ್ತು.

ಅವಳು ಸುಮ್ಮನೇ ನಿಂತುಬಿಟ್ಟಾಗ ಗಂಗೆ ಅವಳನ್ನು ಕಂಡು ನಗುತ್ತಾ ಹೇಳಿದಳು 'ಬಾ ಪೋರೀ.... ಬೇಗ ಯಾಕೆ ಬರಲೆಲ್ಲಿ? ನಾಚ್ತೀ ಯಾಕವ್ವಾ?.... ಇವ್ರು ಹೊಸಬರೇನವ್ವಾ?....'

ಅವಳ ಮಾತಿಗೆ ಸೊಪ್ಪು ಹಾಕದೆ, ಪಾಪು ಅಲ್ಲೇ ನಿಂತು, ಕಣ್ಣರಳಿಸಿ ಒಮ್ಮೆ ಗಂಗೆಯನ್ನು ಒಮ್ಮೆ ಪ್ರಸಾದನನ್ನು ನೋಡುತ್ತ ನಿಂತೇ ಇದ್ದಳು.

'ಬಾರವ್ವಾ.... ಬಾ....' ಮತ್ತೂ ಒಮ್ಮೆ ಗಂಗೆ ಕರೆದಾಗ ಹುಡುಗಿ ತಾಯಿಯ ಕೊರಳನ್ನು ನೋಡಿ ಅಲ್ಲೇ ಕಣ್ಣು ನೆಟ್ಟುಬಿಟ್ಟಳು. ಹಾಗೇ ನಡೆದು ಬಂದು ತೋರು ಬೆರಳು ಎತ್ತಿ ಕರಿಮಣಿ ಇದ್ದ ಸ್ಥಳ ತೋರಿದಳು.

'ಕರಿಮಣಿ ಎಲ್ಲಿ?....' ಎಂದು ಪ್ರಶ್ನೆ ಹಾಕಿತು ಅವಳ ನೋಟ ಆ ಮುಖದಲ್ಲಿ ಯಾವುದೋ ಗಲಿಬಿಲಿ, ನೋವು...'

ಗಂಗೆಗೆ ಅದು ಅರ್ಥವಾಯಿತು....

ಪ್ರಸಾದನಿಗೆ ಉಸುರಿದಳು 'ನೋಡ್ರೀ.... ಪೋರಿ ನನ್ನ ಮ್ಯಾಗೆ ಅದೆಷ್ಟು ಕಾಳಜಿ ಇಟ್ಟಾಳೆ!... ನನ್ನ ಕೊರಳಲ್ಲಿ ಕರಿಮಣಿ ಇಲ್ಲದ್ದು ಗಮನಿಸಿ ಹ್ಯಾಂಗ ಮುಖ ಬಾಡಿಸಿಕೊಂಡಾಳೆ!.... ತಾಳಿ ತೆಗೆದದ್ದು ಅವ್ಳಿಗೆ ಇಷ್ಟ ಇಲ್ರೀ....'

'....ಅವಳನ್ನು ಹೇಗಾದರೂ ಸಮಾಧಾನ ಪಡಿಸು....' ಗಂಗೆ ಮಗಳನ್ನ ನೋಡುತ್ತ, 'ಕೊರಳ ಕರಿಮಣಿ ಸರ ಬಿದ್ಹೋಗಿದೆ... ಇಲ್ಲೇ ಎಲ್ಲೋ ಇರ್ಬೇಕು' ಎನ್ನುತ್ತ ಸುತ್ತ ಕಣ್ಣಿಂದಲೇ ಅರಸಿ ನೋಡಿದಳು. ಸರ, ಒಂದಷ್ಟು ದೂರದಲ್ಲಿ ಸತ್ತ ಹಾವಿನಂತೆ ಬಿದ್ದುಕೊಂಡಿತ್ತು. ಗಂಗಾ ಆಶ್ಚರ್ಯವಾದಂತೆ ಕೂಗಿದಳು. 'ಅದೇ, ಅಲ್ನೋಡು .... ಆ ಕೊಳದ ಬದಿಯಲ್ಲಿ .... ಅಲ್ಲಿ ಬಿದ್ ಹೋಗಿದೆ... ಹೋಗಿ ಎತ್‌ಕಂಡ್ ಬಾರವ್ವಾ....' ಪಾಪು ಹಿಂದಿರುಗಿ ಅಲ್ಲೆಲ್ಲಾ ನೋಡಿದಾಗ ಕರಿಮಣಿ ಸರ ಕಣ್ಣಿಗೆ ಬಿದ್ದಿತು. ಓಡಿ ಹೋಗಿ ಅದನ್ನು ಎತ್ತಿ ತಂದು ತಾಯಿಯ ಕೊರಳ ಬಳಿ ಇಟ್ಟು ನೋಡಿದಳು. ಗಂಗೆ ಮಗಳ ಸಂತೋಷಕ್ಕಾಗಿ ಪುನಃ ಆ ಕರಿಮಣಿ ಧರಿಸಿ, ಮಗಳನ್ನು ಮುದ್ದುಗರೆಯುತ್ತಾ,

'ಈಗ ಸಮಾಧಾನ ಆತಿಲ್ಲೊ!... ಈಗ ಅವ್ವ ನಿಂಗೆ ಸಿಕ್ಕಹಾಗಾಯ್ತಲ್ಲಾ? .... ಈ ಕರಿಮಣಿ ಇಲ್ದಿದ್ರ ... ನಾನು ನಿನಗೆ ಅವ್ವ ಅನ್ನೋಳೇ ಇಲ್ಲೇನು?..' ಎಂದು